

**ಎಡದಿಂದ ಬಲಕ್ಕೆ:**

1. ಆ ತನಕವೂ ಸದಾ ಹೆದರಿಕೆಯೇ ಏಕೆ? (3)
3. ಶೌರ್ಯದ ಪ್ರದರ್ಶನ ನಡೆದದ್ದು ಈ ಕಡಲಲ್ಲೇ (3)
4. ಇಂಥ ಜವಾಹಿರಿ ಕೊಳ್ಳುವುದೇ ಅವರ ಸಂಪ್ರದಾಯ (3)
6. ಸಣ್ಣದೊಂದು ಹಾರಕ್ಕಾಗಿ ಈ ಕೊಲೆ, ನಾಶ (4)
7. ಸುಹಾಸಿನಿಯ ಮನೆಯಲ್ಲಿ ವಿದೇಶೀ ಆಕಳು (4)
9. ಮುಂಜಾನೆಯಲ್ಲೇ ಕಾಣಿಸಿದ ನೋಡಿ ಮುಖ್ಯಸ್ಥ (4)
11. ಹೊಗೆ ಬರಿಸದಂತೆ ಮಾಡಲು ನೂತನ ರೀತಿ (4)
15. ಕಲಿಯಲು ಕಷ್ಟ ಏನಿಲ್ಲ, ಪಾತ್ರೆಗೆ ತವರ ಲೇಪಿಸುವ ಕೆಲಸ (3)
16. ವಸಂತಕ್ಕೆ ತಕ್ಕ ಹೆಸರು, ಹಾಡು ಹಕ್ಕಿಯದು (3)
17. ಮಂದಾರದ ಪರಿಮಳ, ಎಷ್ಟು ಸಿಹಿ! (3)

**ಮೇಲಿಂದ ಕೆಳಕ್ಕೆ:**

1. ಅದಕ್ಕೇ ಹೇಳಿದ್ದು, ಅದೆಲ್ಲ ಬರೀ ಆದಾಯ (3)
2. ಕಾರಿಂದಿಳಿದು ನೋಡಿದರೆ ಎಲ್ಲವೂ ಕಪ್ಪು (3)
3. ಹರುಷ ಹುಡುಕಲೆಂದು ಪಟ್ಟಣಕ್ಕೆ ಬಂದರೇ? (3)
5. ಮಜಲು ನಿರ್ಮಿಸಬೇಕೆಂದು ಭಾರೀ ಒತ್ತಾಯ (3)
6. ಕಂದಾಯವೇ? ಪಾವತಿ ಆಯಿತಲ್ಲ (3)
8. ಸಾಲಾಗಿ ನಿಲ್ಲಿಸಿ ಎಲ್ಲವನ್ನೂ ದೋಚಿದರೇ? (3)
10. ಮರುಕ ಬೇಡ, ಅವನಂತೂ ತುಂಬ ಅಪಾಯಕರ (3)
12. ಸಾಲಕ್ಕಾಗಿಯೇ ಕೊಟ್ಟಿದ್ದು, ಎಲ್ಲವೂ (3)
13. ಯಮನಿಗೂ ಇರಬೇಕು ಬಿಡಿ, ತಾಳ್ಮೆ (3)
14. ಚಾಲಕರ ಕಲ್ಪನೆಯ 'ಬೆಳದಿಂಗಳ ಹಕ್ಕಿ' (3)

## ಪದಬಂಧ: 25-3-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಕಾನನ; 3. ಧರಣಿ; 4. ರಜಕ; 6. ಕೆಡುಕ; 7. ಪರಿಕರ; 9. ಆಮೆವೇಗ; 11. ನಸುನಗು; 13. ಶತಾವರಿ; 15. ಕಾಮನೆ; 17. ನಿರಾಳ; 18. 'ರಿಮಕ' (ಕಮರಿ ಹಿಂದು ಮುಂದು); 19. ಗಡಿಗೆ.

ಮೇಲಿಂದ ಕೆಳಕ್ಕೆ:

1. ಕಾಣಿಕೆ; 2. ನರಕ; 3. ಧನಿಕ; 5. ಕಡಿಮೆ; 7. ಪಲಾಯನ; 8. ರವಿರಂಗು; 9. ಆಶಾಪಾಶ; 10. ಗರಿಮುರಿ; 12. ನಳಿನಿ; 14. ತಾರಕ; 15. ಕಾಳಗ; 16. ನೆರಿಗೆ.

# ಸಸ್ಯ ಸೋಜಿಗ

## 'ಕಡಲ ಕಳೆ'- ಅದೆಂಥ ಸಸ್ಯ?

'ಕಡಲ ಕಳೆ' (ಸೀ ವೀಡ್) – ಹೆಸರೇ ಹೇಳುವಂತೆ ಅದು ಸಾಗರದಲ್ಲಿ ಬೆಳೆವ ಸಸ್ಯ. ಪಾರಾವಾರದ ಲವಣಮಯ ಜಲದಲ್ಲಿ ನೆಲೆಗೊಂಡಿರುವ ಎಲ್ಲ ಸಸ್ಯಗಳೂ ಕಡಲ ಕಳೆಗಳೇ. ಸಸ್ಯ ಸಾಮ್ರಾಜ್ಯದಲ್ಲಿ ಈ ಸಸ್ಯಗಳದೇ ಒಂದು ವಿಶಿಷ್ಟ, ಪ್ರತ್ಯೇಕ ವರ್ಗ.

ವಿಸ್ಮಯ ಏನೆಂದರೆ ಕಡಲ ಕಳೆಗಳು ನೆಲ ಸಸ್ಯಗಳನ್ನು ಕಿಂಚಿತ್ತೂ ಹೋಲುವುದಿಲ್ಲ. ಮಣ್ಣಿನ ಸಂಪರ್ಕವೇ ಇಲ್ಲದೆ, ಕ್ಷಾರಜಲದಿಂದ ಹೊರಕ್ಕೇ ಬಾರದೆ ಬಾಳುವ ಈ ಸಸ್ಯಗಳಿಗೆ ಬೇರುಗಳಿಲ್ಲ, ಎಲೆಗಳಿಲ್ಲ, ಮರ–ತೊಗಟೆ ಇಲ್ಲ. ಅಷ್ಟೇ ಅಲ್ಲ. ಈ ಸಸ್ಯಗಳು ಹೂ ಅರಳಿಸುವುದಿಲ್ಲ; ಹಣ್ಣು–ಕಾಯಿ ಬಿಡುವುದಿಲ್ಲ. ಕಡಲ ನೀರಲ್ಲೇ ತೇಲುತ್ತ ಬದುಕುವ ಕಡಲ ಕಳೆಗಳ ಸ್ವರೂಪವೂ ಕೂಡ ನೆಲಸಸ್ಯಗಳಿಂದ ವಿಭಿನ್ನ; ತುಂಬ ವಿಚಿತ್ರ ಕೂಡ. ಸುರುಳಿ ಸುರುಳಿಯಾದ ಸರ್ಪಗಳಂತೆ, ಗಂಟು ಗಂಟಾದ ಹಗ್ಗಗಳಂತೆ, ಭಾರೀ ಕೂದಲುಗಳ ಗುಚ್ಛಗಳಂತೆ ಅವು ಗೋಚರಿಸುತ್ತವೆ; ನಿಬಿಡವಾಗಿ ಬೆಳೆದು ನಿಂತು, ಏರಿಳಿವ



ಅಲೆಗಳೊಂದಿಗೇ ಬಾಗುತ್ತ ಬಳುಕುತ್ತ ಸೋಜಿಗದ ದೃಶ್ಯ ಸೃಜಿಸುತ್ತವೆ.

ಅದೆಲ್ಲ ಏನೇ ಇದ್ದರೂ ಕಡಲ ಕಳೆಗಳೂ ಸಸ್ಯಗಳೇ ಆದ್ದರಿಂದ ಇತರ ಎಲ್ಲ ಸಸ್ಯಗಳಂತೆಯೇ ಅವೂ ದ್ಯುತಿ ಸಂಶ್ಲೇಷಣೆಯಿಂದಲೇ ಆಹಾರ ತಯಾರಿಸಿಕೊಳ್ಳುತ್ತವೆ. ಈ ಕ್ರಿಯೆಗೆ ಸೂರ್ಯರಶ್ಮಿ ಬೇಕು ಇಂಗಾಲದ ಡೈ ಆಕ್ಸೈಡ್ ಬೇಕು. ಆದ್ದರಿಂದಲೇ ಈ ಸಸ್ಯಗಳು ಕಡಲಲ್ಲಿ ಸೂರ್ಯನ ಬೆಳಕು ಹರಡುವಷ್ಟೇ ಆಳದವರೆಗೆ ಕಡಲ ತಡಿಯ ಸನಿಹಗಳಲ್ಲೋ, ಕಡಲ ಮೇಲ್ಮೈಗೇ ಹೊಂದಿದಂತೆಯೇ ನೆಲೆಸುತ್ತವೆ. ಸೂರ್ಯನ ಬೆಳಕಿನಿಂದಲೇ 'ಶಕ್ತಿ' ಪಡೆದು ಸಾಗರದ ನೀರಿನಿಂದಲೇ ಇಂಗಾಲದ ಡೈ ಆಕ್ಸೈಡ್ ಅನ್ನೂ ಪೋಷಕಾಂಶಗಳನ್ನೂ ಹೀರಿ ಆಹಾರ ತಯಾರಿಸಿಕೊಳ್ಳುತ್ತವೆ. ವೈಚಿತ್ರ್ಯ ಏನೆಂದರೆ ಈ ಸಸ್ಯಗಳು ನೆಲಸಸ್ಯಗಳಿಗೆ ವಿರುದ್ಧವಾಗಿ ಕೆಳಮುಖನಾಗಿ ಬೆಳೆಯುತ್ತವೆ. ಇವುಗಳ 'ಎಲೆಗಳಂತಹ ಅಂಗ'ಗಳೇ ಬೀಜಗಳನ್ನು ಉತ್ಪಾದಿಸಿ ನೀರಿಗೆ ಸುರಿಯುತ್ತವೆ. ಅವು ತೇಲಿ ತೇಲಿ ದೂರ ದೂರ ಸಾಗಿ ಹೊಸಗಿಡಗಳಾಗಿ ಬೆಳೆಯುತ್ತವೆ.

ಕಡಲ ಕಳೆಗಳಲ್ಲಿ ಸಾವಿರಾರು ಪ್ರಭೇದಗಳಿವೆ. ಅವುಗಳ ಬಣ್ಣಗಳನ್ನಾಧರಿಸಿ ಕಡಲ ಕಳೆಗಳನ್ನು ಹಸಿರು, ಕಂದು ಮತ್ತು ಕೆಂಪು ಕಳೆಗಳೆಂದೇ ವರ್ಗೀಕರಿಸ ಲಾಗಿದೆ. ಈ ಗಿಡಗಳ ದಟ್ಟ ಆವಾರದಲ್ಲೇ ಸಾವಿರಾರು ಸಾಗರ ಪ್ರಾಣಿ ಪ್ರಭೇದಗಳು ತಮ್ಮ ಸಂತಾನಾಭಿವೃದ್ಧಿ ಮಾಡುತ್ತವೆ, ಸುರಕ್ಷಿತವಾಗಿ ತಮ್ಮ ಮರಿಗಳ ಪಾಲನೆ ನಡೆಸುತ್ತವೆ. ಬೇಕಾದಷ್ಟು ಬಗೆಯ ಸಾಗರ ಸಸ್ಯಾಹಾರಿಗಳಿಗಂತೂ ಕಡಲ ಕಳೆಗಳೇ ಮೇವು– ಆಹಾರ.

ಎಂಥ ಸೋಜಿಗದ ಸಸ್ಯ ವರ್ಗ! ಅಲ್ಲವೇ?

■ ಎಸ್. ವಾಸುದೇವ್